(ಇಂದು ದಿನಾಂಕ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು:- ಪ್ರತಿವಾದಿ 1 ಹಾಗೂ 2 ರವರ ಪರ ವಕೀಲರಿಂದ:-**

ನಮ್ಮ ಗ್ರಾಮ ಜೋಡಿ ಗ್ರಾಮ. ನಮ್ಮ ಗ್ರಾಮದ ಎಲ್ಲಾ ಆಸ್ತಿಗಳು ಸರ್ಕಾರಕ್ಕೆ ಹೋಗಿತ್ತು ಎಂದರೆ ಸರಿ. ಸ್ವಾಧೀನದಲ್ಲಿ ಇದ್ದವರು ಅರ್ಜಿ ಸಲ್ಲಿಸಿ ಜಾಗವನ್ನು ಮಂಜೂರು ಮಾಡಿಸಿಕೊಂಡರು ಎಂದರೆ ಸರಿ. ನನ್ನ ತಂದೆ ಹೆಸರು ಚಿನ್ನಪ್ಪ. ನನ್ನ ತಂದೆಗೆ ಆಸ್ತಿಗಳು ಮಂಜೂರು ಆಗಿರಲಿಲ್ಲ. ನನ್ನ ತಂದೆಗೂ ಮಂಜೂರು ಆಗಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1958 ರಲ್ಲಿ ನನ್ನ ತಾತನಿಗೆ ಸರ್ವೆ ನಂ.108/10 ರಲ್ಲಿ 4 ಎಕರೆ 29 ಗುಂಟೆ, ಸರ್ವೆ ನಂ.108/5 ರಲ್ಲಿ 5 ಗುಂಟೆ, ಸರ್ವೆ ನಂ.109/4 ರಲ್ಲಿ 12 ಗುಂಟೆ, ಸರ್ವೆ ನಂ.88/6 ರಲ್ಲಿ 1 ಎಕರೆ 8 ಗುಂಟೆ, ಸರ್ವೆ ನಂ. 89/1 ರಲ್ಲಿ 2 ಎಕರೆ 13 ಗುಂಟೆ, ಸರ್ವೆ ನಂ.78/6 ರಲ್ಲಿ 18 ಗುಂಟೆ, ಸರ್ವೆ ನಂ.88/4 ರಲ್ಲಿ 14 ಗುಂಟೆ, ಸರ್ವೆ ನಂ.30/7 ರಲ್ಲಿ 5 ಗುಂಟೆ, ಸರ್ವೆ ನಂ. 3/9 ರಲ್ಲಿ 6 ಗುಂಟೆ. ಮಂಜೂರಾದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇವೆ. ನಾರಾಯಣಪ್ಪ ಎನ್ನುವವರು ನನ್ನ ತಾತನ ತಮ್ಮನ ಮಕ್ಕಳು. ದಾವಾ ಆಸ್ತಿ 1 ನ್ನು ದಿನಾಂಕ 01.03.2010 ರಲ್ಲಿ ಅಬ್ದುಲ್ ವಾಹೀಬ್ ಎನ್ನುವವರಿಗೆ ಮಾರಾಟ ಮಾಡಿದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಕ್ರಯಪತ್ರದಲ್ಲಿ ಆಸ್ತಿ ಹೇಗೆ ಬಂತು ಎಂದು ವಕ್ಕಣೆ ಇದೆ ಎಂದರೆ ಸರಿ. ಸದರಿ ಆಸ್ತಿ ಮುನಿಯಲ್ಲಪ್ಪ ಎನ್ನುವವರಿಗೆ ಮಂಜೂರು ಆಗಿತ್ತು ಎಂದರೆ ಸರಿಯಲ್ಲ. ಮುನಿಯಲ್ಲಪ್ಪ ಮೃತಪಟ್ಟ ನಂತರ ಅಬ್ದುಲ್ ವಾಹಬ್ ಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಕುಟುಂಬದ ಸದಸ್ಯರು ಅಬ್ದುಲ್ ವಾಹೀಬ್ ಗೆ ದಾವಾ ಆಸ್ತಿ 1 ಕ್ಕೆ ಸಂಬಂಧಿಸಿದೆ ಒಪ್ಪಿಗೆ ಪತ್ರವನ್ನು ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ಈ ದಾವೆ ಚಾಲ್ತಿಯಲ್ಲಿರಬೇಕಾದರೆ ನಾವು ಒಪ್ಪಿಗೆ ಪತ್ರವನ್ನು ನಾವು ಮಾಡಿಕೊಟ್ಟಿದ್ದೇವೆ. ಒಪ್ಪಿಗೆ ಪತ್ರ ಮಾಡಿಕೊಡುವಾಗ ನಾವು ಅಬ್ದುಲ್ ವಾಹೀಬ್ ಕಡೆಯಿಂದ ಹಣ ಪಡೆದಿದ್ದೇವೆ ಎಂದರೆ ಸರಿಯಲ್ಲ, ಸದರಿ ಪತ್ರಕ್ಕೆ ಪಿಳ್ಳಮ್ಮ ಹಾಗೂ ನಾಗಪ್ಪ ಕಕ್ಷಿದಾರರಲ್ಲ. ಬೇರೆ ಯಾವುದೇ ಪ್ರತಿವಾದಿಗಳು ಸದರಿ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿ 1 ನಿಮ್ಮ ತಂದೆಗೆ ವಿಭಾಗದಲ್ಲಿ ಬಂದಿರುವ ಸ್ವತ್ತು ಎಂದರೆ ಸಾಕ್ಷಿ ನನ್ನ ತಾತನಿಗೆ ಬಂದ ಸ್ವತ್ತು ಎನ್ನುತ್ತಾರೆ, ನನ್ನ ತಾತ ಮೃತಪಟ್ಟ ನಂತರ ನನ್ನ ತಂದೆಗೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನನ್ನ ತಂದೆಗೆ ಬೇರೆ ಆಸ್ತಿಗಳು ಬಂದಿದ್ದವು ಎಂದರೆ ಸರಿಯಲ್ಲ. ಸರ್ವೆ ನಂ.108/8 ರ ಕಂದಾಯ ದಾಖಲೆಗಳು ನನ್ನ ತಂದೆಯ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ನನ್ನ ತಂದೆಗೆ ಭಾಗದಲ್ಲಿ ಬಂದಿದ್ದ ಆಸ್ತಿಗಳನ್ನು ನಾನು ಹಾಗೂ ನನ್ನ ತಮ್ಮ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಿಭಾಗದಲ್ಲಿ ಬಂದ 2 ಗುಂಟೆಯನ್ನು ನಾನು ಪ್ರತಿವಾದಿ 22 ರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ 8 ನ್ನು ನಾನು ಹಾಗೂ ನನ್ನ ಕುಟುಂಬದವರು ದಿನಾಂಕ 18.03.2021 ರಲ್ಲಿ ಅಬ್ದುಲ್ ವಾಹೀಬ್ ರವರಿಗೆ ಒಪ್ಪಿಗೆ ಪತ್ರ

ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ನಾವು ಹಣ ಪಡೆದು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ 4 ರಲ್ಲಿ 2 ಗುಂಟೆ ಸ್ವತ್ತನ್ನು ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿ. ಷೇಕ್ ರಿಜ್ವಾನ್ ಎನ್ನುವವರಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾವು ಅಧಿಕಾರಪತ್ರವನ್ನು ಮಾಡಿಕೊಟ್ಟಿದ್ದೇವೆ. ಜಿಪಿಎ ಆಧಾರದ ಮೇಲೆ ಕಂದಾಯ ದಾಖಲೆಗಳು ನಮ್ಮ ಹೆಸರಿಗೆ ವರ್ಗಾಯಿಸಬೇಕು ಎಂದು ಉಪವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ. ಅದರ ಮೇಲೆ ಮೇಲ್ಮನವಿ ಸಲ್ಲಿಸಿದ್ದೇವೆ. ಜಿಲ್ಲಾಧಿಕಾರಿಗಳ ಮುಂದೆ ಮೇಲ್ಮನವಿ ಬಾಕಿ ಇದೆ. ಜಿಲ್ಲಾಧಿಕಾರಿಗಳ ಮುಂದೆ ನಮ್ಮ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ನಮಗೂ ಯಾವುದೇ ಸಂಬಂಧ ಇಲ್ಲ. ನನ್ನ ತಂದೆಗೆ ಬಂದ ಆಸ್ತಿಗಳನ್ನು ನಾನು ನನ್ನ ತಮ್ಮ ಭಾಗ ಮಾಡಿಕೊಂಡು ಮಾರಾಟ ಮಾಡಿ ಈಗ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 18.03.2021 ರಂದು ಸರ್ವೆ ನಂ.89/1, 21 ಗುಂಟೆಗೆ ಅಬ್ದುಲ್ ವಾಹೀಬ್ ಗೆ ನಾವು ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿ. ಮುನಿಯಲ್ಲಪ್ಪ ನಮ್ಮ ತಾತ. ದಾವಾ ಆಸ್ತಿ 12 ಹಾಗೂ 13 ಮುನಿರಾಮಯ್ಯನಿಗೆ ಮಂಜೂರಾದ ಆಸ್ತಿಗಳು ಎಂದರೆ ಸರಿ. ಮಂಜೂರಾದ ನಂತರ 1 ಎಕರೆಯನ್ನು ಅಬ್ದುಲ್ ಗಫರ್ ಸಾಬ್ ರವರಿಗೆ ಮಾರಾಟ ಮಾಡಿದರು ಎಂದರೆ ಸರಿಯಲ್ಲ. ಉಳಿದ 1 ಎಕರೆಯನ್ನು ಅವರ ಮಗ ಹಾಗೂ ಸೊಸೆ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ, ಸದರಿ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕಿಲ್ಲ. ಅಬ್ದುಲ್ ಗಫರ್ ಸಾಬ ಮೃತಪಟ್ಟ ನಂತರ ಅವರ ಮಕ್ಕಳು ಗಜೇಂದ್ರಗೆ ಮಾರಾಟ ಮಡಿದ್ದಾರೆ ಎಂದರೆ ಸರಿ. ಅದರಲ್ಲಿ ಈಗ ಗಜೇಂದ್ರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಯಾವ ದಾವಾ ಆಸ್ತಿಗಳಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 5 ಗುಂಟೆ ಜಮೀನು ಹೊರತುಪಡಿಸಿ ಉಳಿದ ಆಸ್ತಿಗಳಲೆಲ್ಲಾ ಖರೀದಿದಾರರು ಮನೆಗಳನ್ನು ಕಟ್ಟಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಕಾಲದಲ್ಲಿ ಭಾಗ ಆಗಿಲ್ಲ ಎಂದು ಯಾವ ದಾವೆ ಸಲ್ಲಿಸಿರಲಿಲ್ಲ. ಕಾರಣ ಆ ಮುಂಚೆಯೇ ಭಾಗ ಆಗಿದ್ದ ಕಾರಣ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ.

**(ಪ್ರತಿವಾದಿ 32 ರವರ ಪರ ವಕೀಲರ ಕೋರಿಕೆಯ ಮೇರೆಗೆ ವಾಟೀ ಸವಾಲನ್ನು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.